(Pages : 8)

# 3423—E 81—V SC—O—November 2014

FIFTH SEMESTER B.Com. DEGREE EXAMINATION, 2014

(Old Syllabus)

## COST ACCOUNTING — I

Time : Three Hours | Maximum : 80 Marks

*Attempt Questions according to internal choice in each section.*
*Give working notes wherever necessary.*
*Non-programmable calculator is allowed.*
**Question 13** *(Case Study)* **is compulsory.**

### Section A

1. Answer any *ten* of the following :—

   (a) Classify costs according to behaviour or nature.

   (b) State two advantages of Cost Accounting to society.

   (c) What is Work-in-Progress?

   (d) Differentiate Normal Loss with Abnormal Loss.

   (e) What includes materials?

   (f) Write formula of Stock Turnover Ratio.

   (g) Where surplus stock recorded in Stores Ledger card.

   (h) Give the meaning of time-keeping.

   (i) Generally how much paid to workers for overtime work?

   (j) What is Overhead?

   (k) State basis of apportionment of overhead :

      (i) Rent and Rates.

      (ii) Welfare expenses.

      (iii) Indirect wages.

      (iv) Insurance.

   (l) Nirmala worked for 10 hours and produced 300 products. The piece rate per unit is Rs. 6 per product. Calculate wages of Nirmala.

(10 × 2 = 20 marks)

### Section B

*Answer any* **three** *of the following.*
*Each question carries 5 marks.*

2. What are the advantags of Cost Accounting?

Turn over

3. Prepare cost sheet from the following information provided by Manorama :

| | |
|---|---|
| Material cost | ... Rs. 3,00,000 |
| Wages | ... Rs. 1,50,000 |
| Direct expenses | ... Rs. 50,000 |

Factory overhead — 20% of prime cost.

Administrative overhead — 10% of factory cost.

Selling expenses — Rs. 5 per unit.

Units produced and sold — 8,000.

4. Muralidhar wants to know the different stock levels from the following information :—

Lead time — 3 to 5 weeks

Reorder quantity — 6,000 kgs.

Monthly consumption — Minimum 2,400 kgs.
Maximum 4,600 kgs.

5. Given below the extract of materials 'M' and 'N'. Calculate Material Turnover Ratio :

| *Particulars* | | *Material 'M'* | *Material 'N'* |
|---|---|---|---|
| | | Rs. | Rs. |
| Stock on 1-4-2013 | ... | 25,000 | 87,500 |
| Stock on 31-03-2014 | ... | 15,000 | 62,500 |
| Purchases | ... | 1,90,000 | 1,25,000 |

6. Calculate earnings under Halsey Plan :

Standard output per day of 8 hours is 80 units. Normal wages per day Rs. 120. Actual output 120 units.

7. There are two products in a factory the detailed cost is as under :

| *Particulars* | | *Product 'M'* | *Product 'N'* |
|---|---|---|---|
| | | Rs. | Rs. |
| Materials consumed | ... | 16,000 | 20,000 |
| Labour cost | ... | 12,000 | 10,000 |

Overhead recovered is 25% on prime cost. The actual overhead for product M – Rs. 8,000 and product B – Rs. 6,500.

Determine under or over absorption of OH.

(3 × 5 = 15 marks)

## Section C

*Answer any* **three** *questions including* **Question 13** *which is* **compulsory.**

8. Explain the objective of cost accountancy and distinguish cost accountancy from financial accountancy.

9. From the following details prepare a Cost Sheet as on 31-12-2013 :

| | | Rs. |
|---|---|---|
| Opening Stock of raw materials | ... | 60,000 |
| Purchases of raw materials | ... | 1,90,000 |
| Closing stock of raw materials | ... | 40,000 |
| Wages – Productive | ... | 1,60,000 |
| – General | ... | 26,000 |
| Chargeable expenses | ... | 42,000 |
| Rent, rates and taxes – Factory | ... | 12,000 |
| – Office | ... | 1,500 |
| Depreciation on plant and machinery | ... | 3,750 |
| Salary – Office | ... | 6,000 |
| – Travellers | ... | 4,600 |
| Printing & Stationery | ... | 1,300 |
| Office cleaning and lighting | ... | 900 |
| Repairs – Factory | ... | 4,600 |
| Managing Directors salary | ... | 24,000 |
| Travelling expenses of salesmen | ... | 2,500 |
| Carriage outward | ... | 2,000 |
| Carriage inward | ... | 4,500 |
| Advance income tax | ... | 20,000 |
| Sales | ... | 6,40,000 |

Managing Directors salary is to be distributed in the ratio of 2 : 1 : 3 among Factory, Office and Sales divisions.

10. From the following details calculate :

(a) Reorder level. (b) Maximum stock level.

(c) Minimum stock level. (d) Average stock level.

(e) Material turnover ratio.

| | | |
|---|---|---|
| Maximum consumption | – | Units 12,000 per month |
| Minimum consumption | – | Units 8,000 per month |
| Reorder quantity | – | 24,000 units |
| Reorder period | – | 1 to 3 weeks |

Annual consumption of the material is 1,20,000 units.

11. The following particulars relate to a product :

Standard output per day of 8 hours — 16 units

Normal wage per day — Rs. 48

Actual output by two workers A and B on a day of 8 hours – A – 20 units and B – 24 units.

**Turn over**

Calculate earnings of A and B under :

(a) Time rate. (b) Price rate.

(c) Halsey (50 : 50) plan. (d) Rowan plan.

12. The departmental overheads of a factory having four production departments P, Q, R and S and two service departments M and N are given below :

| Production Departments | Service Departments |
|---|---|
| P – Rs. 2,670 | M – Rs. 1,500 |
| Q – Rs. 1,830 | N – Rs. 680 |
| R – Rs. 1,280 | |
| S – Rs. 1,050 | |

The overheads of service departments are charged out on a percentage basis as given below :

| | | P | Q | R | S | M | N |
|---|---|---|---|---|---|---|---|
| Service Dept. M | ... | 15% | 25% | 10% | 30% | — | 20% |
| Service Dept. N | ... | 20% | 30% | 25% | 15% | 10% | — |

Reapportion the service department expenses to production departments using repeated distribution method and calculate overhead recovery rates for production departments if the working hours are 3,000, 4,000, 2,500 and 1,500 respectively for P, Q, R and S depts.

13. **Case Study** :

Following details are extracted from the records of a factory :

| | | |
|---|---|---|
| Materials used | ... | Rs. 1,20,000 |
| Direct labour | ... | Rs. 80,000 |
| Machine hours operateed | ... | 30,000 |
| Labour hours worked | ... | 10,000 |
| Total overheads of the department | ... | Rs. 60,000 |

An order was executed in the department during the current year for which following details are provided :

| | | |
|---|---|---|
| Materials used | ... | Rs. 16,000 |
| Direct labour | ... | Rs. 12,000 |
| Labour hours used | ... | 1,600 |
| Machine hours used | ... | 700 |

Prepare a comparative statement of cost of this job when following methods of overhead absorption are used :—

(a) Direct labour cost method.

(b) Direct labour hour rate method.

(c) Machine hour rate method.

(3 × 15 = 45 marks)

## Kannada Version

*ಆಂತರಿಕ ಆಯ್ಕೆಗೆ ಅನುಗುಣವಾಗಿ ಎಲ್ಲಾ ವಿಭಾಗಗಳನ್ನು ಉತ್ತರಿಸಿರಿ.*
*ಅವಶ್ಯವಿದ್ದಲ್ಲಿ ಟಿಪ್ಪಣಿಗಳನ್ನು ಬರೆಯಿರಿ.*
*ನಾನ್-ಪ್ರೋಗ್ರಾಮಬಲ್ ಗಣಕಯಂತ್ರದ ಉಪಯೋಗವನ್ನು ಮಾನ್ಯ ಮಾಡಲಾಗಿದೆ.*
**ಪ್ರಶ್ನೆ 13 (ಪ್ರಕರಣ ಅಧ್ಯಯನ ಪ್ರಶ್ನೆ) ಕಡ್ಡಾಯವಾಗಿದೆ.**

### ವಿಭಾಗ ಅ

1. ಈ ಕೆಳಗಿನವುಗಳಲ್ಲಿ ಯಾವುದಾದರೂ **ಹತ್ತಕ್ಕೆ** ಉತ್ತರಿಸಿ :

(a) ಗುಣಧರ್ಮಗಳ ಪ್ರಕಾರ ವೆಚ್ಚಗಳನ್ನು ವಿಂಗಡಿಸಿ.

(b) ಸಮಾಜಕ್ಕೆ ವೆಚ್ಚ ನಿರ್ಣಯಶಾಸ್ತ್ರದಿಂದ ಆಗುವ ಎರಡು ಉಪಯೋಗಗಳನ್ನು ತಿಳಿಸಿ.

(c) ಪ್ರಗತಿಯಲ್ಲಿರುವ ಕೆಲಸ ಎಂದರೇನು?

(d) ಸಾಮಾನ್ಯ ನಷ್ಟ ಮತ್ತು ವಿಶೇಷ ನಷ್ಟದಲ್ಲಿರುವ ಅಂತರವೇನು?

(e) ಸರಕು ಒಳಗೊಂಡಿರುವ ಅಂಶಗಳಾವವು?

(f) ಸರಕು ಚಲನದರದ ಫಾರ್ಮುಲಾ ಬರೆಯಿರಿ.

(g) ಅಧಿಕ ಸರಕುಗಳು ಕಂಡುಬಂದಾಗ ಸರಕು ಖಾತೆಯಲ್ಲಿ ಹೇಗೆ ನಮೂದಿಸುತ್ತೀರಿ?

(h) ಸಮಯ ಪಾಲನೆಯ ಅರ್ಥ ನೀಡಿ.

(i) ಸಾಮಾನ್ಯವಾಗಿ ಕೂಲಿಕಾರನು ತನ್ನ ನಿಗದಿತ ಸಮಯಕ್ಕಿಂತ ಹೆಚ್ಚಿನ ಸಮಯ ಕೆಲಸ ಮಾಡಿದ ಸಮಯಕ್ಕೆ ಯಾವ ದರದಲ್ಲಿ ಕೂಲಿ ನೀಡಲಾಗುವುದು?

(j) ಮೇಲ್ವೆಚ್ಚ ಎಂದರೇನು?

(k) ಕೆಳಕಾಣಿಸಿದ ಮೇಲ್ವೆಚ್ಚಗಳನ್ನು ಯಾವ ತಳಹದಿಯ ಮೇಲೆ ಹಂಚಲಾಗುತ್ತದೆ?

(i) ಬಾಡಿಗೆ ಮತ್ತು ತೆರಿಗೆ. (ii) ಕಲ್ಯಾಣ ಖರ್ಚುಗಳು.

(iii) ಅಪರೋಕ್ಷ ಕೂಲಿ. (iv) ವಿಮೆ.

(l) ನಿರ್ಮಲಾ 10 ಗಂಟೆಗಳ ಕೆಲಸದ ಅವಧಿಯಲ್ಲಿ 300 ವಸ್ತುಗಳನ್ನು ಉತ್ಪಾದಿಸಿದಳು. ಪ್ರತಿಯೊಂದು ವಸ್ತುವಿನ ತುಂಡು ಕೂಲಿದರವು ರೂ. 6 ಆಗಿರುತ್ತದೆ. ನಿರ್ಮಲಾಳ ಕೂಲಿ ಕಂಡುಹಿಡಿಯಿರಿ.

(10 × 2 = 20 marks)

### ವಿಭಾಗ ಬ

*ಕೆಳಗಿನವುಗಳಲ್ಲಿ ಯಾವುದಾದರೂ* **ಮೂರಕ್ಕೆ** *ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳನ್ನು ನೀಡಲಾಗುವುದು.*

2. ವೆಚ್ಚ ನಿರ್ಣಯಶಾಸ್ತ್ರದ ಅನುಕೂಲತೆಗಳಾವವು?

3. ಮನೋರಮಾ ನೀಡಿರುವ ಮಾಹಿತಿಯೊಂದಿಗೆ ವೆಚ್ಚ ತಖ್ತೆ ತಯಾರಿಸಿ :

| | | |
|---|---|---|
| ಸರಕುಗಳ ವೆಚ್ಚ | ... | ರೂ. 3,00,000 |
| ನೇರ ಕೂಲಿ | ... | ರೂ. 1,50,000 |
| ನೇರ ವೆಚ್ಚಗಳು | ... | ರೂ. 50,000 |
| ಕಾರ್ಖಾನೆಯ ಮೇಲ್ವೆಚ್ಚ | ... | ಪ್ರಧಾನ ವೆಚ್ಚದ ಶೇ. 20 ರಷ್ಟು |
| ಆಡಳಿತಾತ್ಮಕ ಮೇಲ್ವೆಚ್ಚ | ... | ಕಾರ್ಖಾನೆ ವೆಚ್ಚದ ಶೇ. 10 ರಷ್ಟು |
| ಮಾರಾಟದ ಖರ್ಚುಗಳು | ... | ಪ್ರತಿ ಯುನಿಟಿಗೆ ರೂ. 5 |
| ಉತ್ಪಾದನೆಗೊಂಡು ಮಾರಾಟವಾದ ವಸ್ತುಗಳು | ... | 8,000 |

4. ಕೆಳಗಿನ ಮಾಹಿತಿಯ ಮುಖಾಂತರ ಮುರಳೀಧರನು ವಿವಿಧ ದಾಸ್ತಾನುಮಟ್ಟ ತಿಳಿದುಕೊಳ್ಳಲು ಇಷ್ಟಪಟ್ಟಿರುತ್ತಾನೆ :

| | | |
|---|---|---|
| ಬಟವಡೆ ಅವಧಿ | – | 3 ರಿಂದ 5 ವಾರಗಳು |
| ಮರು ಆದೇಶ ಪ್ರಮಾಣ | – | 6,000 ಕಿ.ಗ್ರಾಂ. |
| ತಿಂಗಳ ಬಳಕೆ – ಕನಿಷ್ಟ | – | 2,400 ಕಿ.ಗ್ರಾಂ. |
| – ಗರಿಷ್ಠ | – | 4,600 ಕಿ.ಗ್ರಾಂ. |

5. ಕೆಳಗೆ ನೀಡಿರುವ ಮಾಹಿತಿಯೊಂದಿಗೆ M ಮತ್ತು N ವಸ್ತುಗಳ ಚಲನದರ ಕಂಡುಹಿಡಿಯಿರಿ :

| ವಿವರ | | ಸಾಮಗ್ರಿ M | ಸಾಮಗ್ರಿ N |
|---|---|---|---|
| | | ರೂ. | ರೂ. |
| ಸಾಮಗ್ರಿ ಶಿಲ್ಕು ದಿ 1-4-2013 | ... | 25,000 | 87,500 |
| ಸಾಮಗ್ರಿ ಶಿಲ್ಕು 31-3-2014 | ... | 15,000 | 62,500 |
| ಖರೀದಿ | ... | 1,90,000 | 1,25,000 |

6. ಹ್ಯಾಲ್ಸೆ ಪದ್ಧತಿಯ ಮೂಲಕ ಗಳಿಕೆಯನ್ನು ಕಂಡುಹಿಡಿಯಿರಿ :

ಪ್ರಮಾಣೀಕೃತ ಉತ್ಪಾದನೆ – 8 ಗಂಟೆಯಲ್ಲಿ 80 ವಸ್ತುಗಳ ಉತ್ಪಾದನೆ

ಸಾಮಾನ್ಯ ಪ್ರತಿ ದಿವಸ (8 ಗಂಟೆಯ)ದ ನೇರ ಕೂಲಿ – ರೂ. 120

ಉತ್ಪಾದಿಸಿದ ವಸ್ತುಗಳು – 120 ಯುನಿಟ್‌ಗಳು.

7. ಕಾರ್ಖಾನೆಯಲ್ಲಿ ತಯಾರಾಗುವ ಎರಡು ವಸ್ತುಗಳ ವಿವರವು ಈ ಕೆಳಗಿನಂತಿದೆ :

| ವಿವರ | | ವಸ್ತು M | ವಸ್ತು N |
|---|---|---|---|
| | | ರೂ. | ರೂ. |
| ಬಳಕೆಯಾದ ಸಾಮಗ್ರಿ | ... | 16,000 | 20,000 |
| ನೇರ ಕೂಲಿ | ... | 12,000 | 10,000 |

ಮೇಲ್ವೆಚ್ಚವು ಪ್ರಧಾನ ವೆಚ್ಚದ ಶೇ. 25 ಆಕರಿಸಲಾಗಿದೆ. ನಿಜವಾದ ಅಪರೋಕ್ಷ ಮೇಲ್ವೆಚ್ಚಗಳು ಅನುಕ್ರಮವಾಗಿ ರೂ. 8,000 ಹಾಗೂ ರೂ. 6,500 ಆಗಿರುತ್ತದೆ. ಮೇಲ್ವೆಚ್ಚಗಳು ಹೆಚ್ಚುವರಿಯಾಗಿ ಆಕರಿಸಲ್ಪಟ್ಟಿದೆಯೋ ಅಥವಾ ಕಡಿಮೆಯಾಗಿ ಆಕರಿಸಲ್ಪಟ್ಟಿದೆಯೋ ತಿಳಿಸಿ.

(3 × 5 = 15 marks)

## ವಿಭಾಗ ಕ

**ಪ್ರಶ್ನೆ ಸಂಖ್ಯೆ 13 (ಕಡ್ಡಾಯವಾಗಿದೆ)** *ಸೇರಿದಂತೆ ಈ ಕೆಳಗಿನ ಯಾವುದಾದರೂ* **ಮೂರು** *ಪ್ರಶ್ನೆಗಳಿಗೆ ಉತ್ತರಿಸಿರಿ.*

8. ವೆಚ್ಚಶಾಸ್ತ್ರದ ಉದ್ದೇಶಗಳನ್ನು ತಿಳಿಸಿರಿ ಹಾಗೂ ವೆಚ್ಚಶಾಸ್ತ್ರ ಮತ್ತು ಲೆಖ್ಖಶಾಸ್ತ್ರಗಳ ನಡುವಿನ ವ್ಯತ್ಯಾಸಗಳನ್ನು ವಿವರಿಸಿರಿ.

9. ಈ ಕೆಳಗಿನ ಮಾಹಿತಿಗಳಿಂದ 31-12-2013ರಂದು ಇರುವಂತೆ ವೆಚ್ಚಪಟ್ಟಿ ತಯಾರಿಸಿರಿ :

| | | ರೂ.ಗಳು |
|---|---|---|
| ಕಚ್ಚಾ ಸರಕುಗಳ ಪ್ರಾರಂಭದ ಶಿಲ್ಕು | ... | 60,000 |
| ಕಚ್ಚಾ ಸರಕುಗಳ ಖರೀದಿ | ... | 1,90,000 |
| ಕಚ್ಚಾ ಸರಕುಗಳ ಕೊನೇ ಶಿಲ್ಕು | ... | 40,000 |
| ಕೂಲಿ – ಉತ್ಪಾದಕತೆಗೆ ಸಂಬಂಧಿಸಿದ್ದು | ... | 1,60,000 |
| – ಸಾಮಾನ್ಯ | ... | 26,000 |
| ನೇರ ಖರ್ಚುಗಳು | ... | 42,000 |
| ಬಾಡಿಗೆ, ತೆರಿಗೆ ಇತ್ಯಾದಿ – ಕಾರ್ಖಾನೆ ವಿಭಾಗ | ... | 12,000 |
| – ಕಾರ್ಯಾಲಯ | ... | 1,500 |
| ಯಂತ್ರೋಪಕರಣಗಳ ಮೇಲೆ ಸವಕಳಿ | ... | 3,750 |
| ಸಂಬಳ – ಕಾರ್ಯಾಲಯ | ... | 6,000 |
| – ಮಾರಾಟಗಾರರದ್ದು | ... | 4,600 |
| ಮುದ್ರಣ ಹಾಗೂ ಲೇಖನ ಸಾಮಗ್ರಿ ವೆಚ್ಚ | ... | 1,300 |
| ಕಾರ್ಯಾಲಯದ ಸ್ವಚ್ಛತೆ ಹಾಗೂ ದೀಪವ್ಯವಸ್ಥೆಗಳಿಗಾಗಿ | ... | 900 |
| ಕಾರ್ಖಾನೆಯ ದುರಸ್ತಿ ವೆಚ್ಚ | ... | 4,600 |
| ಕಾರ್ಯಕಾರೀ ವ್ಯವಸ್ಥಾಪಕರ ವೆಚ್ಚ | ... | 24,000 |
| ಮಾರಾಟಗಾರರ ತಿರುಗಾಟ ವೆಚ್ಚ | ... | 2,500 |
| ಹೊರಹೋಗುವ ಗಾಡಿ ಬಾಡಿಗೆಗಳು | ... | 2,000 |
| ಒಳಬರುವ ವಸ್ತುಗಳ ಗಾಡಿ ಬಾಡಿಗೆಗಳು | ... | 4,500 |
| ಮುಂಗಡವಾಗಿ ಕಟ್ಟಿದ ಆದಾಯ ಕರ | ... | 20,000 |
| ಮಾರಾಟ | ... | 6,40,000 |

ವ್ಯವಸ್ಥಾಪಕ ನಿರ್ದೇಶಕರ ಸಂಬಳವನ್ನು 2 : 1 : 3 ಅನುಪಾತದಲ್ಲಿ ಕಾರ್ಖಾನೆ, ಕಾರ್ಯಾಲಯ ಹಾಗೂ ಮಾರಾಟ ವಿಭಾಗಗಳಿಗೆ ಹಂಚಬೇಕು.

10. ಈ ಕೆಳಗಿನ ಮಾಹಿತಿಗಳಿಂದ :

(a) ಪುನರಾದೇಶ ಮಟ್ಟ, (b) ಗರಿಷ್ಠ ಶಿಲ್ಕಿನ ಮಟ್ಟ,

(c) ಕನಿಷ್ಠ ಶಿಲ್ಕಿನ ಮಟ್ಟ, (d) ಸರಾಸರಿ ಶಿಲ್ಕಿನ ಮಟ್ಟ, ಹಾಗೂ

(e) ಸರಕಿನ ಚಲನವಲನ ಅನುಪಾತಗಳನ್ನು ಕಂಡುಹಿಡಿಯಿರಿ :

| | | |
|---|---|---|
| ಗರಿಷ್ಠ ಬಳಕೆ | ... | ತಿಂಗಳಿಗೆ 12,000 ಯುನಿಟ್‌ಗಳು |
| ಕನಿಷ್ಠ ಬಳಕೆ | ... | ತಿಂಗಳಿಗೆ 8,000 ಯುನಿಟ್‌ಗಳು |
| ಪುನರಾದೇಶ ಗಾತ್ರ | ... | 24,000 ಯೂನಿಟ್‌ಗಳು |
| ಪುನರಾದೇಶ ಅವಧಿ | ... | 1 ರಿಂದ 3 ವಾರಗಳು |

ವಾರ್ಷಿಕ ಬಳಕೆಯು 1,20,000 ಯುನಿಟ್‌ಗಳಿರುತ್ತವೆ.

11. ಒಂದು ವಸ್ತುವಿಗೆ ಸಂಬಂಧಿಸಿದಂತೆ ಈ ಕೆಳಗಿನ ಮಾಹಿತಿ ಕೊಡಲಾಗಿರುತ್ತದೆ :

8 ತಾಸುಗಳ ಒಂದು ದಿನದಲ್ಲಿ ತಯಾರಿಸಬೇಕಾದ ಪ್ರಮಾಣೀಕೃತ ಯುನಿಟ್‌ಗಳು – 16

ಒಂದು ದಿನದ ಸಾಮಾನ್ಯ ಕೂಲಿ – ರೂ. 48

'ಎ' ಹಾಗೂ 'ಬಿ' ಎಂಬ ಇಬ್ಬರು ಕೆಲಸಗಾರರು 8 ತಾಸುಗಳ ಒಂದು ದಿನದಲ್ಲಿ ಉತ್ಪಾದಿಸಿದ ಯುನಿಟ್‌ಗಳು :

ಎ – 20 ಹಾಗೂ ಬಿ – 24 ಯುನಿಟ್‌ಗಳು.

ಎ ಹಾಗೂ ಬಿ ಎಂಬುವವರ ಗಳಿಕೆಯನ್ನು ಈ ಕೆಳಗಿನ ಪ್ಲಾನ್‌ಗಳನ್ನು ಬಳಸಿ ಕಂಡುಹಿಡಿಯಿರಿ :

(a) ಸಮಯಾಧಾರಿತ ಕೂಲಿ. (b) ತುಂಡು ದರ ಪದ್ಧತಿ.

(c) ಹಾಲ್ಸೆ ಪ್ಲಾನ್. (d) ರೋವನ್ ಪ್ಲಾನ್.

12. ನಾಲ್ಕು ಉತ್ಪಾದನಾ ವಿಭಾಗಗಳು ಹಾಗೂ ಎರಡು ಸೇವಾ ವಿಭಾಗಗಳಿರುವ ಒಂದು ಕಾರ್ಖಾನೆಯಲ್ಲಿ ವಿಭಾಗೀಯ ಪರೋಕ್ಷ ವೆಚ್ಚಗಳು ಈ ಕೆಳಗಿನಂತಿರುತ್ತವೆ. ಉತ್ಪಾದನಾ ವಿಭಾಗಗಳು ಪಿ, ಕ್ಯೂ, ಆರ್, ಎಸ್ ಹಾಗೂ ಸೇವಾ ವಿಭಾಗಗಳು ಎಮ್ ಹಾಗೂ ಎನ್ ಎಂದಿರುತ್ತವೆ :

| ಉತ್ಪಾದನಾ ವಿಭಾಗಗಳು | | ಸೇವಾ ವಿಭಾಗಗಳು | |
|---|---|---|---|
| ಪಿ | – ರೂ. 2,670 | ಎಮ್ | – 1,500 ರೂ.ಗಳು |
| ಕ್ಯೂ | – ರೂ. 1,830 | ಎನ್ | – 680 ರೂ. ಗಳು. |
| ಆರ್ | – ರೂ. 1,280 | | |
| ಎಸ್ | – ರೂ. 1,050 | | |

ಸೇವಾ ವಿಭಾಗ ವೆಚ್ಚಗಳನ್ನು ಶೇಕಡಾವಾರು ಪದ್ಧತಿಯಲ್ಲಿ ಈ ಕೆಳಗಿನ ಅನುಪಾತದಲ್ಲಿ ಹಂಚಲಾಗುತ್ತದೆ :

| | ಪಿ | ಕ್ಯೂ | ಆರ್ | ಎಸ್ | ಎಮ್ | ಎನ್ |
|---|---|---|---|---|---|---|
| ಸೇವಾ ವಿಭಾಗ ಎಮ್ ... | 15% | 25% | 10% | 30% | – | 20% |
| ಸೇವಾ ವಿಭಾಗ ಎನ್ ... | 20% | 30% | 25% | 15% | 10% | – |

ಸೇವಾ ವಿಭಾಗ ವೆಚ್ಚಗಳನ್ನು ಉತ್ಪಾದನಾ ವಿಭಾಗಗಳಿಗೆ ಪದೇ ಪದೇ ಹಂಚುವ ಪದ್ಧತಿಯಲ್ಲಿ ಹಂಚಿರಿ ಹಾಗೂ ಪರೋಕ್ಷ ವೆಚ್ಚ ಆಕರಿಸುವ ದರವನ್ನು ಕಂಡುಹಿಡಿಯಿರಿ. ಉತ್ಪಾದನಾ ವಿಭಾಗದ ಕೆಲಸದ ಗಂಟೆಗಳು ಈ ರೀತಿ ಇರುತ್ತವೆ :

ಪಿ – 3,000; ಕ್ಯೂ – 4,000; ಆರ್ – 2,500 ಮತ್ತು ಎಸ್ – 1,500 ಗಂಟೆಗಳಿರುತ್ತವೆ.

13. ಕಡ್ಡಾಯ ಪ್ರಶ್ನೆ ಪ್ರಕರಣ ಅಧ್ಯಯನ :

ಒಂದು ಕಾರ್ಖಾನೆಯ ಪುಸ್ತಕಗಳಿಂದ ಈ ಕೆಳಗಿನ ಮಾಹಿತಿಯನ್ನು ಸಂಗ್ರಹಿಸಲಾಗಿರುತ್ತದೆ :

| | | |
|---|---|---|
| ಕಚ್ಚಾ ಸರಕುಗಳ ಬೆಲೆ | ... | ರೂ. 1,20,000 |
| ನೇರ ಕೂಲಿ | ... | ರೂ. 80,000 |
| ಯಂತ್ರ ಗಂಟೆಗಳು | ,,, | 30,000 |
| ಕೂಲಿ ಗಂಟೆಗಳು | ... | 10,000 |

ವಿಭಾಗದ ಒಟ್ಟೂ ಪರೋಕ್ಷ ವೆಚ್ಚ ರೂ. 60,000 ಇರುತ್ತದೆ.

ಪ್ರಸಕ್ತ ಸಾಲಿನಲ್ಲಿ ಪೂರ್ತಿಗೊಳಿಸಿದ ಒಂದು ಆದೇಶಕ್ಕೆ ತಗುಲಿದ ವೆಚ್ಚ ಹಾಗೂ ಇತರ ಮಾಹಿತಿಗಳು ಕೆಳಗಿನಂತಿವೆ :

ಸರಕುಗಳ ವೆಚ್ಚ – ರೂ. 16,000; ನೇರ ಕೂಲಿ ... ರೂ. 12,000; ಕೂಲಿ ಗಂಟೆಗಳು ... 1,600 ಹಾಗೂ ಯಂತ್ರೋಪಕರಣ ಗಂಟೆ – 700.

ಈ ಕೆಳಗಿನ ಬೇರೆ ಬೇರೆ ಪದ್ಧತಿಗಳಲ್ಲಿ ಹೋಲಿಕೆಯಿರುವ ಒಂದು ಪ್ರತಿಯನ್ನು ತಯಾರಿಸಿರಿ :

(a) ನೇರ ಕೂಲಿ ವೆಚ್ಚದ ಆಧಾರಿತ. (b) ಕೂಲಿ ಗಂಟೆ ದರ.

(c) ಯಂತ್ರೋಪಕರಣದ ಗಂಟೆ ದರ.

(3 × 15 = 45 marks)